
# ಗೆಜ್ಜೆವಸ್ತ್ರ ವೈಭವ..!





ಹಬ್ಬದ ಸಮಯದಲ್ಲಿ ದೇವರ ಅಲಂಕಾರ ಜೋರು. ಹಬ್ಬಗಳು ಆರಂಭವಾಗುವ ಒಂದು ತಿಂಗಳ ಮುಂಚೆಯೇ ಹಬ್ಬಕ್ಕೆ ಬೇಕಾದ, ಅಲಂಕಾರಗಳಿಗೆ ಬೇಕಾದ ಎಲ್ಲಾ ಸಾಮಗ್ರಿಗಳ ತಯಾರಿ ಮನೆ ಮನೆಗಳಲ್ಲಿ ನಡೆಯುತ್ತಿರುತ್ತದೆ. ಪ್ರತಿ ಸಾರಿಗಿಂತ ಈ ಸಾರಿಯ ಅಲಂಕಾರ ಭಿನ್ನವಾಗಿರಬೇಕೆಂಬ ಹಂಬಲ ಎಲ್ಲರಲ್ಲೂ ಸಹಜ, ಹತ್ತಿಯ ಗೆಜ್ಜೆವಸ್ತ್ರಗಳನ್ನು ತಯಾರಿಸುವುದು ಸಹ ಈಗಲೇ.
ಅಂತೆಯೇ ಒಂದೊಂದು ಹಬ್ಬಕ್ಕೂ ಹತ್ತಿಯ ಗೆಜ್ಜೆ ಎಳೆಗಳು ಎಣಿಕೆಯಲ್ಲಿ ಬೇರೆ ಬೇರೆ, ಅರಳೆಯನ್ನು ಹಿಂಜಿ ಸರಳನ್ನು ಮಾಡಿ ಮಧ್ಯೆ ಮಧ್ಯೆ ಹಿಂಜಿ ಮಂಗಲ ದ್ರವ್ಯಗಳನ್ನು ಹಚ್ಚಿ ತಯಾರಿಸುವ ಗೆಜ್ಜೆ ಸಾಂಪ್ರದಾಯಿಕವಾದದ್ದು, ಇದು ಪೂಜೆಗೆ ಶ್ರೇಷ್ಠ ಎನ್ನುವ ವಾಡಿಕೆ ಬೇರೆ! ಆದರೆ ಈ ನವೀನ ಯುಗದಲ್ಲಿ ವೈವಿಧ್ಯಮಯ ಗೆಜ್ಜೆವಸ್ತ್ರಗಳು ನಾರಿಯರ ಕೈಯಲ್ಲಿ ತಯಾರಾಗುತ್ತಿವೆ, ಅರಳೆಯನ್ನು ಬಿಡಿಸಿ ಬಣ್ಣದ ನೀರಿನಲ್ಲಿ ಅದ್ದಿ ಒಣಗಿಸಿ, ಎಳೆಗಳನ್ನು ಬಿಡಿಸಿ ಅಥವಾ ವಸ್ತ್ರಗಳನ್ನು ತಯಾರಿಸಿ (ಸ್ವಲ್ಪ ಹತ್ತಿಯನ್ನ ತೆಗೆದುಕೊಂಡು ಬಿಲ್ಲೆ ಗಾತ್ರ ಹಿಂಜಿ ಸುತ್ತಲೂ ಅಂಚು ಕಟ್ಟುವುದು.) ವಿವಿಧ ರೀತಿಯ ವಿನ್ಯಾಸಗಳನ್ನು ಮಾಡಿ ಅಲ್ಲಲ್ಲೆ ಆಕರ್ಷಕ ಟಿಕ್ಕಳಿಗಳನ್ನು ಹಚ್ಚಿ ತಯಾರಿಸಿದ ಗೆಜ್ಜೆವಸ್ತ್ರಗಳು ನೋಡಲು ಬಲು ಸುಂದರ. ಅತಿ ಚಿಕ್ಕದಾದ ಗೆಜ್ಜೆವಸ್ತ್ರಗಳು ಬಾಗಿಲಿನ ಮೇಲ್ಭಾಗಕ್ಕೆ ಹಚ್ಚಲು ಸೂಕ್ತ. ಸ್ವಲ್ಪ ದೊಡ್ಡದಾಗಿ ತಯಾರಿಸಿದರೆ ಅದು ಕಳಸಕ್ಕೆ ಸೂಕ್ತ. ಹಾರಗಳು ವ್ರತ ಪೂಜಾದಿಗಳ ಅಲಂಕಾರಕ್ಕೆ ಹೇಳಿ ಮಾಡಿಸಿದವು.

ಇವನ್ನು ತಯಾರಿಸಲು ಅಂಟು, ಬಣ್ಣದ ಹತ್ತಿ, ತೆಳು ರಟ್ಟುಗಳು, ಜೊತೆಗೆ ಬಣ್ಣ ಬಣ್ಣದ ಮಿಣಿ, ಮಿಣಿ ಟಿಕ್ಕಳಿಗಳು ಬೇಕು. ಇದಲ್ಲದೆ ಬ್ಯಾಂಡೇಜ್ ಹತ್ತಿಯಿಂದ ತಯಾರಿಸುವ ಹಾರಗಳು ಇನ್ನು ಸುಲಭದವು, ರೋಲ್‌ನಿಂದ ಪದರಗಳನ್ನು ಬಿಡಿಸಿ ಕಾಗದದ ಮೇಲೆ ಅಂಟನ್ನು ಹಚ್ಚಿ ಈಗ ಬಿಡಿಸಿದ ಪದರವನ್ನು ಅಂಟಿನ ಕಾಗದ ಮೇಲೆ ಹಚ್ಚಿ ಒಣಗಿಸಿ. ಈಗ ವಿವಿಧ ವಿನ್ಯಾಸಗಳಲ್ಲಿ ಕತ್ತರಿಸಿ ಟಿಕ್ಕಳಿಗಳನ್ನು ಹಚ್ಚಿದರೆ ಹಾರ ರೆಡಿ. ಈಗ ನೋಡಿ ಇಲ್ಲಿವೆ ಅನುಕರಣೆಗೆ ಸ್ವಲ್ಪ ಡಿಸೈನ್‌ಗಳು, ಇದನ್ನು ನೋಡಿ ನೀವೂ ಮಾಡಿ  ಹಬ್ಬಗಳನ್ನು ರಂಗಾಗಿಸಿ.

■ ಬಿ.ಎಸ್. ಚಂದ್ರಕಲಾ



